ಶ್ರೀ ಡಿ. ಸುಧಾಕರ (ಸಮಾಜ ಕಲ್ಯಾಣ ಸಚಿವರು) :

ಅ) ನಿಯಮಾವಳಿಗಳಂತೆ ಕನಿಷ್ಟ 2 ಎಕರೆ ಜಮೀನು ಹೊಂದಿರುವ ಸಣ್ಣ ಹಿಡುವಳಿದಾರರಿಗೆ ಸೌಲಭ್ಯವನ್ನು ಕಲ್ಪಿಸುತ್ತಿದ್ದು, 20 ಗುಂಟೆ ಜಮೀನು ಇರುವ ಸಣ್ಣ ಹಿಡುವಳಿದಾರರು ಸೌಲಭ್ಯ ಪಡೆಯಲು ಅರ್ಹರಾಗಿರುವುದಿಲ್ಲ.

ಆ) ಯೋಜನೆಯ ನಿಬಂಧನೆಗಳಡಿ 20 ಗುಂಟೆ ಜಮೀನು ಇರುವ ಫಲಾಪೇಕ್ಷಿಗಳಿಗೆ ವೈಯಕ್ತಿಕ ನೀರಾವರಿ ಕೊಳವೆಬಾವಿ ಸೌಲಭ್ಯ ಕಲ್ಪಿಸಲು ಅವಕಾಶವಿರುವುದಿಲ್ಲ. ಆದರೆ 8 ರಿಂದ 15 ಎಕರೆ ಜಮೀನು ಒಂದೇ ಕಡೆ ಇದ್ದು 3 ಕ್ಕಿಂತ ಹೆಚ್ಚು ಫಲಾಪೇಕ್ಷಿಗಳಿಗೆ ಒದಗಿಸುವ ಸಾಮೂಹಿಕ ನೀರಾವರಿ ಘಟಕಗಳಲ್ಲಿ 20 ಗುಂಟೆ ಜಮೀನು ಹೊಂದಿರುವ ಅತೀ ಸಣ್ಣ ರೈತರೂ ಸಹ ಸೌಲಭ್ಯ ಪಡೆಯಲು ಅರ್ಹರಿರುತ್ತಾರೆ.

ಇ) ರಾಜ್ಯದಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಒಟ್ಟು 111353 ಫಲಾನುಭವಿಗಳಿಗೆ ಸೌಲಭ್ಯವನ್ನು ಒದಗಿಸಲಾಗಿದ್ದು, ಒಟ್ಟು ರೂ.76950.20 ಗಳನ್ನು ಖರ್ಚಾಗಿರುತ್ತದೆ.

2009 ನೇ ಸಾಲಿನಲ್ಲಿ ಇಲ್ಲಿಯವರೆಗೆ ಎಷ್ಟು ಬಸ್ಸುಗಳನ್ನು ಖರೀದಿಸಲಾಗಿದೆ

892 (1148) ಶ್ರೀ ಮಹದೇವ ಪ್ರಸಾದ್ (ಗುಂಡ್ಲುಪೇಟೆ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು 2009 ನೇ ಸಾಲಿನಲ್ಲಿ ಇಲ್ಲಿಯವರೆಗೆ ಎಷ್ಟು ಬಸ್ಸುಗಳನ್ನು ಖರೀದಿಸಲಾಗಿದೆ;

ಆ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು 209 ನೇ ಸಾಲಿನಲ್ಲಿ ಇಲಾಖೆಯ ವತಿಯಿಂದ ಮೂಲಭೂತ ಸೌಲಭ್ಯ ಅಭಿವೃದ್ಧಿಗಾಗಿ ಎಷ್ಟು ಅನುದಾನ ಒದಗಿಸಲಾಗಿದೆ ಹಾಗೂ ಎಷ್ಟು ಹಣವನ್ನು ಇಲ್ಲಿಯವರೆಗೆ ಬಿಡುಗಡೆ ಮಾಡಲಾಗಿದೆ. ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ;

ಇ) ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ ಎಷ್ಟು ಅನುದಾನ ಒದಗಿಸಲಾಗಿದೆ ಇಲ್ಲಿಯವರೆಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ?

ಶ್ರೀ ಆರ್.ಅಶೋಕ (ಸಾರಿಗೆ ಸಚಿವರು) :

ಅ) ಏಪ್ರಿಲ್ 2009 ರಿಂದ ಫೆಬ್ರವರಿ–2010ರ ಅಂತ್ಯದವರೆಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಒಟ್ಟು 685 ಹೊಸ ವಾಹನಗಳನ್ನು ಖರೀದಿಸಿರುತ್ತದೆ. ವಿವರ ಈ ಕೆಳಕಂಡಂತಿದೆ.

ಕ್ರ. ಸಂ.	ವಾಹನಗಳ ಮಾದರಿ	ವಾಹನಗಳ ಸಂಖ್ಯೆ
1	ಕರ್ನಾಟಕ ಸಾರಿಗೆ	378
2	ಗ್ರಾಮಾಂತರ ಸಾರಿಗೆ	53
3	ನಗರ ಸಾರಿಗೆ (ಜೆ.ಎನ್.ಎನ್.ಯೂ.ಆರ್.ಎಂ) ಲೇಲ್ಯಾಂಡ ನಗರ ಸಾರಿಗೆ–79 ಟಾಟಾ ನಗರ ಸಾರಿಗೆ–41 ವೋಲ್ವೋ ನಗರ ಸಾರಿಗೆ–30	150
4	ರಾಜಹಂಸ	36
5	ವೋಲ್ವೋ ಐರಾವತ	60
6	ಕರೋನಾ ಸ್ಲೀಪರ್	8
	ಒಟ್ಟು	**685**

ಆ) 2009–10ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವತಿಯಿಂದ ಮೂಲಭೂತ ಸೌಲಭ್ಯ ಅಭಿವೃದ್ಧಿಗಾಗಿ ರೂ.45 ಕೋಟಿ ಒದಗಿಸಲಾಗಿದೆ. ಈ ಪೈಕಿ ಇದುವರೆವಿಗೂ ಸುಮಾರು 33.00 ಕೋಟಿ ರೂ.ಗಳನ್ನು ಬಿಡುಗಡೆಗೊಳಿಸಿ ವೆಚ್ಚ ಮಾಡಲಾಗಿದೆ.

ಇ) 2009–10ನೇ ಸಾಲಿನಲ್ಲಿ ವಿಶೇಷ ಅಭಿವೃದ್ಧಿ ಯೋಜನೆ ಯಡಿಯಲ್ಲಿ 2500.00 ಲಕ್ಷ ರೂ.ಗಳನ್ನು ಒದಗಿಸಲಾಗಿದ್ದು, ಪೂರ್ಣ ಹಣವನ್ನು ಬಿಡುಗಡೆ ಮಾಡಲಾಗಿದೆ.

ಮಹಿಳಾ ಅಭಿವೃದ್ಧಿ ನಿಗಮ ಸ್ಥಾಪನೆ

893 (1416) ಶ್ರೀ ಮಹೇಶ್ ಎಸ್. ಆರ್. (ಕೃಷ್ಣರಾಜನಗರ) : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಮಹಿಳಾ ಅಭಿವೃದ್ಧಿ ನಿಗಮ ಯಾವಾಗ ಸ್ಥಾಪನೆಯಾಯಿತು?

ಆ) ಈ ನಿಗಮವು ಮಹಿಳೆಯರ ಅಭಿವೃದ್ಧಿಗಾಗಿ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ?